ಕಾರ್ಯವು ಮುಕ್ತಾಯವಾಗಿದೆ. ಆಸ್ಫಾಲ್ಟಿಂಗ್ ಕಾಂಕ್ರೀಟನ್ನು ಹಾಕುವ ಕಾರ್ಯವನ್ನು ಸಧ್ಯದಲ್ಲಿ ಕೈಗೆತ್ತಿಕೊಳ್ಳಲಾಗುವುದು.

ಅ) ಈ ಎರಡೂ ಕಾಮಗಾರಿಗಳನ್ನು 31ನೇ ಡಿಸೆಂಬರ್, 2000ಕ್ಕೆ ಮುಗಿಸುವುದಕ್ಕಾಗಿ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಳಪೆ ಕಾಮಗಾರಿಗಳು

4413 - ಶ್ರೀ ಅಶೋಕ್ ಆರ್. (ಉತ್ತರಹಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆಯ ಬಾಂಡ್ ಹಣದಲ್ಲಿ ರಸ್ತೆಗಳ ಕಳಪೆ ಕಾಮಗಾರಿಗಳ ಬಗ್ಗೆ ಪರಿಶೀಲನಾ ಸಭೆ ನಡೆದಿರುವುದು ನಿಜವೇ? ಈ ಸಭೆಯಲ್ಲಿ ಅಟ್ಲಾಂಟಾ ಮತ್ತು ಪಲ್ಲವಿ ಕಾಮಗಾರಿ ಗುತ್ತಿಗೆದಾರರ ಮೇಲೆ ಕ್ರಮ ಜರುಗಿಸಲು ತೀರ್ಮಾನ ತೆಗೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಾಂಡ್ ಹಣದ ಮುಖ್ಯ ರಸ್ತೆಗಳ ಕಳಪೆ ಕಾಮಗಾರಿ ಕೆಲಸಗಳು ನಡೆದಿರುವುದರಿಂದ ಉಳಿದ ಕೆಲಸಗಳು ಸಡಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಬೆಂಗಳೂರು ಮಹಾನಗರ ಪಾಲಿಕೆಯು ಬಾಂಡ್ ಸ್ಕೀಮ್ ಅಡಿಯಲ್ಲಿ ಕೈಗೊಂಡಿರುವ ರಸ್ತೆಗಳ ಅಭಿವೃದ್ಧಿ ಹಾಗೂ ಗುಣಮಟ್ಟದ ಬಗ್ಗೆ ವಿಮರ್ಶಿಸಲು ಸತತವಾಗಿ ಸಭೆಗಳನ್ನು ನಡೆಸುತ್ತಿರುತ್ತದೆ. ಅಂತೆಯೇ ಪಲ್ಲವಿ ಹಾಗೂ ಅಟ್ಲಾಂಟಾ ಕಂಪನಿಗಳಿಗೆ ಪ್ರಗತಿಯಲ್ಲಿ ಕುಂಠಿತವಾಗಿರುವ ಬಗ್ಗೆ ತಿಳುವಳಿಕೆ ಪತ್ರ ಬರೆಯಲಾಗಿದೆ.

ಆ) ವಿಶಿಷ್ಟ ವಿವರಣೆಗಿಂತ ಭಿನ್ನವಾಗಿ ಕೆಲಸಗಳು ನಡೆದಿರುವುದಿಲ್ಲ ಅಂತೆಯೇ ಇತರ ಕೆಲಸಗಳು ಸಡಿಲಗೊಂಡಿರುವುದಿಲ್ಲ.

ಬೆಂಗಳೂರನ್ನು ಸಿಂಗಾಪೂರ್ ಮಾದರಿಯಲ್ಲಿ ಅಭಿವೃದ್ಧಿಪಡಿಸುವುದು

4414 - ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರನ್ನು ಸಿಂಗಾಪೂರ್ ಮಾದರಿಯಲ್ಲಿ ಅಭಿವೃದ್ಧಿಪಡಿಸುವುದಾಗಿ ಘೋಷಿಸಿದಾಗ ಅದಕ್ಕಾಗಿ ಕಾರ್ಯನಿರತಪಡೆ (ಬಿಎಟಿಎಫ್) ರಚನೆಯಿಂದ ಬೆಂಗಳೂರಿಗೆ ಆಗಿರತಕ್ಕಂತ ಉಪಯೋಗವೇನು?